17.01.2020. ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.
ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಸ್ ಕೆ ವಕೀಲರಿಂದ,

ದಿಃ 12.07.2010 ರಂದು ಆದ ಕ್ರಯ ಕರಾರು ಪತ್ರ ಹಾಜರು ಪಡಿಸಿದ್ದು ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ದಿಃ 17.01.2011 ರಂದು ಆದ ಮುಂದುವರಿದ ಕರಾರು ಪತ್ರವನ್ನು ಹಾಜರು ಪಡಿಸಿದ್ದು ನಿಪಿ 4 ಎಂದು ಗುರುತಿಸಲಾಯಿತು. ನಿಪಿ 3 ಮತ್ತು 4 ರಲ್ಲಿಯ ಪ್ರತಿವಾದಿಯರ ಸಹಿಗಳನ್ನು ಮತ್ತು ವಾದಿ ನಂಃ 1 ಇವರ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಅವುಗಳನ್ನು ನಿಪಿ 3 ಎ ದಿಂದ ನಿಪಿ 3 ಎಫ್ ಎಂದು ಹಾಗೂ ನಿಪಿ 4 ಎ ದಿಂದ ನಿಪ 4 ಎಫ್ ಎಂದು ಗುರುತಿಸಲಾಯಿತು. ನಿಪಿ 4 ರಲ್ಲಿಯ ಬರಹಗಾರರ ಸಹಿಯನ್ನು ನಿಪಿ 4 ಜಿ ಎಂದು ಗುರುತಿಸಲಾಯಿತು. ವಕೀಲರ ನೋಟಿಸ್, ಅಂಚೆ ರಸೀದಿಗಳು, ಅಂಚೆ ಸ್ವೀಕೃತಿಗಳು ಮತ್ತು ಒಂದು ಅಂಚೆ ಕವರ್ ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 5 ರಿಂದ ನಿಪಿ 15 ಎಂದು ಗುರುತಿಸಲಾಯಿತು. ನಿಪಿ 3 ಮತ್ತು 4 ರಲ್ಲಿಯ ಸಾಕ್ಷಿದಾರರ ಸಹಿಗಳನ್ನು ಕ್ರಮವಾಗಿ ನಿಪಿ 3 ಜಿ ಮತ್ತು ನಿ ಪಿ 3 ಹೆಚ್ ಎಂದು, ನಿಪಿ 4 ಹೆಚ್ ಮತ್ತು ನಿಪಿ 4 ಐ ಎಂದು ಗುರುತಿಸಲಾಯಿತು. ಜಿಲ್ಲಾ ನೊಂದಣಾಧಿಕಾರಿಗಳು ನೀಡಿದ ಹಿಂಬರಹವನ್ನು ನಿಪಿ 16 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ವಕೀಲರು ಸಮಯ ಕೇಳಿದ್ದು ಅವರ ವಿನಂತಿ ಮೇರೆಗೆ ಸಮಯ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ 17.01.2020 ರಂದು ಬೆರಳಚ್ಚು ಮಾಡಲಾಯಿತು)**

***ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು-ಎಎಂಎಸಿಟಿ-11,***
***ಭದ್ರಾವತಿ.***